# ಎನ್‌ಐಟಿಕೆ: ಶ್ರೀನಿವಾಸ ಮಲ್ಯರ ಸ್ಮರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್ ಎನ್‌ಐಟಿಕೆಯಲ್ಲಿ ಸಂಸ್ಥಾಪಕ ಯು. ಶ್ರೀನಿವಾಸ್ ಮಲ್ಯ ಅವರ 121ನೇ ಜನ್ಮ ದಿನವನ್ನು ಮಂಗಳವಾರ ಆಚರಿಸಲಾಯಿತು.

ಎನ್‌ಐಟಿಕೆ ನಿರ್ದೇಶಕ ಪ್ರೊ. ಬಿ.ರವಿ ಮಾತನಾಡಿ, 'ಮಲ್ಯ ಅವರು ರಾಜ್ಯ ಮತ್ತು ದೇಶಕ್ಕೆ ಶಾಶ್ವತ ಕೊಡುಗೆ ನೀಡಿದ್ದಾರೆ. ಶಿಕ್ಷಣ, ಆರೋಗ್ಯ, ಸಾಮಾಜಿಕ ಕಲ್ಯಾಣ ಮತ್ತು ಧಾರ್ಮಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದವರು. ದೇವಾಲಯಗಳಿಗೆ ಪರಿಶಿಷ್ಟರ ಪ್ರವೇಶ, ಅಸ್ಪೃಶ್ಯತೆ ನಿರ್ಮೂಲನೆಯಂತಹ ಗಾಂಧೀಜಿಯ ಮಾರ್ಗಗಳನ್ನು ಅನುಸರಿಸಿ, ಮಾದರಿಯಾದವರು' ಎಂದು ಹೇಳಿದರು.

ಎನ್‌ಐಟಿಕೆ ಕ್ಯಾಂಪಸ್‌ನಲ್ಲಿರುವ ಮಲ್ಯ ಅವರ ಪ್ರತಿಮೆಗೆ ಗೌರವ ಸಲ್ಲಿಸಲಾಯಿತು. ಎನ್‌ಐಟಿಕೆ ಉಸ್ತುವಾರಿ ನಿರ್ದೇಶಕ ಮತ್ತು ಡೀನ್ ರಿಸರ್ಚ್ ಅಂಡ್ ಕನ್ಸಲ್ಟೆನ್ಸಿ ಪ್ರೊ. ಎಸ್.ಎಂ.ಕುಲಕರ್ಣಿ, ರಿಜಿಸ್ಟ್ರಾರ್, ಎನ್‌ಐಟಿಕೆ ಹಳೆಯ ವಿದ್ಯಾರ್ಥಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು ಮಾಲಾರ್ಪಣೆ ಮಾಡಿದರು.



ಸುರತ್ಕಲ್ ಎನ್‌ಐಟಿಕೆಯಲ್ಲಿ ಸಂಸ್ಥಾಪಕ ಶ್ರೀನಿವಾಸ ಮಲ್ಯ ಅವರಿಗೆ ಗೌರವ ಸಲ್ಲಿಸಲಾಯಿತು

Prajavani, Date: 22/11/23, p. no - 03